ಬೆಂಗೂರು ಗ್ರಾಮದಿಂದ ಮಣಿಪಾಲ್ ಕೌಂಟಿ ಮುಖೇನ ಹೊಸೂರು ರಸ್ತೆಯ ಸಂಪರ್ಕ ಕಲ್ಪಿಸುವ ರಸ್ತೆಯನ್ನು ಪರಿಷ್ಕೃತ ಮಹಾನಕ್ಷೆ–2015 (Revised Master Plan-2015) ಪ್ರಕಾರ 18.00 ಮೀ. ಗಳಿಗೆ ಅಗಲೀಕರಣಗೊಳಿಸಲು ಉದ್ದೇಶಿಸಿದ್ದು, ಸುಮಾರು 3 ಕಿ.ಮೀ ಉದ್ದದ ರಸ್ತೆಯನ್ನು ಅಗಲೀಕರಣಗೊಳಿಸುವ ಕಾಮಗಾರಿಯು ಅನುಮೋದನೆಗೊಂಡಿದ್ದು, ಈಗಾಗಲೇ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು, ಸದ್ಯದಲ್ಲಿಯೇ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಕೂಡ್ಲುಗೇಟ್–ಸರ್ಜಾಪುರ ರಸ್ತೆಗೆ ಸಂಬಂಧಿಸಿದಂತೆ ಕೂಡ್ಲುಗೇಟ್‌ನಿಂದ ಹರಳೂರು ರಸ್ತೆ ಜಂಕ್ಷನ್‌ವರೆಗೆ ಒಟ್ಟು 2.3 ಕಿ.ಮೀ ಉದ್ದದ ರಸ್ತೆಯನ್ನು ಈಗಾಗಲೇ ಡಾಂಬರೀಕರಣಗೊಳಿಸಿ ಅಭಿವೃದ್ಧಿ ಪಡಿಸಲಾಗಿರುತ್ತದೆ. ಕೂಡ್ಲುಗೇಟ್–ಸರ್ಜಾಪುರ ರಸ್ತೆಯು ಪರಿಷ್ಕೃತ ಮಹಾನಕ್ಷೆ–2015 ಪ್ರಕಾರ 15.00ಮೀ ಹಾಗೂ 24.00 ಮೀ ಅಗಲಕ್ಕೆ ಅಗಲೀಕರಣಗೊಳಿಸುವ ಪ್ರಸ್ತಾವನೆ ಇದ್ದು. ಈವರೆಗೆ ಯಾವುದೇ ಅಗಲೀಕರಣ ಕಾಮಗಾರಿಯನ್ನು ಕೈಗೊಂಡಿರುವುದಿಲ್ಲ.

ಚೆಕ್‌ಪೋಸ್ಟ್‌ಗಳು

1174(883); ಡಾ॥ ಮಾಲಕ ರೆಡ್ಡಿ ಎ.ಬಿ. (ಯಾದಗಿರಿ)

ಅ) ಯಾದಗಿರಿ, ರಾಯಚೂರು, ಕೊಪ್ಪಳ ಹಾಗೂ ಬಾಗಲಕೋಟೆ ಜಿಲ್ಲೆಗಳಲ್ಲಿನ ಅಕ್ರಮ ಕಲ್ಲು ಗಣಿಗಾರಿಕೆ ಮತ್ತು ಸಾಗಾಟವನ್ನು ತಡೆಯಲು ಆಯಕಟ್ಟಿನ ಸ್ಥಳಗಳಲ್ಲಿ ತನಿಖಾ ಠಾಣೆ/ಚೆಕ್ ಪೋಸ್ಟ್‌ಗಳನ್ನು ಸ್ಥಾಪಿಸಲಾಗಿದೆಯೇ;

ಆ) ಹಾಗಿದ್ದಲ್ಲಿ, ಈ ಜಿಲ್ಲೆಗಳ ಆಯಕಟ್ಟಿನ ಸ್ಥಳಗಳಲ್ಲಿ ಚೆಕ್ ಪೋಸ್ಟ್ ಸ್ಥಾಪಿಸಲು 2014–15 ನೇ ಸಾಲಿನಲ್ಲಿ ಬಿಡುಗಡೆ ಮಾಡಿದ 50 ಲಕ್ಷ

ರೂಗಳ ವೆಚ್ಚದಲ್ಲಿ, ಯಾವ ಯಾವ ಸ್ಥಳಗಳಲ್ಲಿ ಚೆಕ್ ಪೋಸ್ಟ್ ಸ್ಥಾಪಿಸಲಾಗಿದೆ. (ಸಮಗ್ರ ವಿವರಗಳನ್ನು ನೀಡುವುದು).

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಯವರು)

ಅ) ಹೌದು.

ಜಿಲ್ಲಾವಾರು ಚೆಕ್‌ಪೋಸ್ಟ್ ಸ್ಥಾಪನೆ ವಿವರ ಕೆಳಕಂಡಂತಿದೆ.

1. ಯಾದಗಿರಿ ಜಿಲ್ಲೆ, ಶಹಪುರ ತಾಲ್ಲೂಕು, ಹತ್ತಿಗೂಡು ಗ್ರಾಮ ಮತ್ತು ಶೋರಪುರ ತಾಲ್ಲೂಕು, ಹಸನಾಪುರ ಗ್ರಾಮ ವ್ಯಾಪ್ತಿಯಲ್ಲಿ ಯಾದಗಿರಿ ಜಿಲ್ಲಾ ಮರಳು ಉಸ್ತುವಾರಿ ಸಮಿತಿ ವತಿಯಿಂದ ತನಿಖಾ ಠಾಣೆ ಸ್ಥಾಪಿಸಿ ಅಕ್ರಮ ಕಲ್ಲು ಗಣಿಗಾರಿಕೆ ಮತ್ತು ಸಾಗಾಟವನ್ನು ತಡೆಯಲು ಕ್ರಮ ಕೈಗೊಳ್ಳಲಾಗಿದೆ.

2. ರಾಯಚೂರು ಜಿಲ್ಲೆ, ರಾಯಚೂರು ತಾಲ್ಲೂಕು, ಸಿದ್ರಾಂಪುರ ಗ್ರಾಮದ ವ್ಯಾಪ್ತಿಯಲ್ಲಿ ತನಿಖಾ ಠಾಣೆ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ.

3. ಕೊಪ್ಪಳ ಜಿಲ್ಲೆ, ಕೊಪ್ಪಳ ತಾಲ್ಲೂಕು, ಹನುಮಸಾಗರ ಗ್ರಾಮ ಮತ್ತು ಕುಷ್ಟಗಿ ತಾಲ್ಲೂಕು, ಕ್ಯಾದಿಗುಪ್ಪ ಗ್ರಾಮ ವ್ಯಾಪ್ತಿಯಲ್ಲಿ ಅಧಿಸೂಚಿತ ತನಿಖಾ ಠಾಣೆಗಳನ್ನು ಸ್ಥಾಪಿಸಿ ಅಕ್ರಮ ಕಲ್ಲು ಗಣಿಗಾರಿಕೆ ಮತ್ತು ಸಾಗಾಟವನ್ನು ತಡೆಯಲು ಕ್ರಮ ಕೈಗೊಳ್ಳಲಾಗಿದೆ.

4. ಬಾಗಲಕೋಟೆ ಜಿಲ್ಲೆಯಲ್ಲಿ ಚೆಕ್ ಪೋಸ್ಟ ಸ್ಥಾಪಿಸಿರುವುದಿಲ್ಲ.

ಆ) ಯಾದಗಿರಿ ಜಿಲ್ಲೆ, ರಾಯಚೂರು ಜಿಲ್ಲೆ, ಕೊಪ್ಪಳ ಜಿಲ್ಲೆ ಹಾಗೂ ಬಾಗಲಕೋಟೆ ಜಿಲ್ಲೆಗಳಲ್ಲಿನ ಅನಧಿಕೃತ ಉಪಖನಿಜಗಳ ಸಾಗಾಣಿಕೆ/ಗಣಿಗಾರಿಕೆ ತಡೆಗಟ್ಟಲು, ತನಿಖಾ ಠಾಣೆಗಳನ್ನು ನಿರ್ಮಾಣ ಮಾಡಲು ಹಾಗೂ ಕ್ವಾರಿಯಿಂಗ್ ಪ್ಲಾನ್ ಮತ್ತು Environment

Management Plas ಸಿದ್ದಪಡಿಸಲು RQP(Registered Qualified Person) ವೆಚ್ಚಗಳಿಗಾಗಿ ನಿಯಮ–31S ರಂತೆ ಜಿಲ್ಲಾ ಮರಳು ಉಸ್ತುವಾರಿ ಸಮಿತಿಗಳಿಗೆ District Corpus Fund ಗೆ 2014–15ನೇ ಸಾಲಿನಲ್ಲಿ ಈ ಕೆಳಕಂಡಂತೆ ಹಣ ಬಿಡುಗಡೆ ಮಾಡಲಾಗಿದೆ.

ಕ್ರ ಸಂ	ಜಿಲ್ಲೆ	2014–15ನೇ ಸಾಲಿನಲ್ಲಿ ಬಿಡುಗಡೆ ಮಾಡಲಾದ ಹಣದ ವಿವರ (ರೂ.ಲಕ್ಷಗಳಲ್ಲಿ)
1	ಯಾದಗಿರಿ	30.00
2	ರಾಯಚೂರು,	60.00
3	ಕೊಪ್ಪಳ	15.00
4	ಬಾಗಲಕೋಟೆ	15.00

Corpus Fund ನಿಧಿಯಿಂದ ಈ ಜಿಲ್ಲೆಗಳಲ್ಲಿ ಚೆಕ್ ಪೋಸ್ಟ್‌ಗಳನ್ನು ಸ್ಥಾಪಿಸಿರುವುದಿಲ್ಲ.

ಜಲ್ಲಿ ಕ್ರಷರ್‌ಗಳಿಗೆ ಪರವಾನಗಿ ನೀಡುವುದು

1175(2311); ಡಾ॥ ಕೆ. ಶ್ರೀನಿವಾಸ ಮೂರ್ತಿ (ನೆಲಮಂಗಲ)

ಅ) 2013–14ನೇ ಮತ್ತು 2014–15ನೇ ಸಾಲಿನಲ್ಲಿ ರಾಜ್ಯದಲ್ಲಿ ಎಷ್ಟು ಜಲ್ಲಿ ಕ್ರಷರ್‌ಗಳಿಗೆ ಪರವಾನಿಗೆ ನೀಡಲಾಗಿದೆ. (ತಾಲ್ಲೂಕುವಾರು ಮಾಹಿತಿ ನೀಡುವುದು)

ಆ) ಸರ್ಕಾರದ ಜಾಗದಲ್ಲಿ ಹಾಗೂ ಪಟ್ಟಾ/ಖಾಸಗಿ ಜಮೀನುಗಳಲ್ಲಿ ಎಷ್ಟು ಜಲ್ಲಿ ಕ್ರಷರ್‌ಗಳಿಗೆ ಹೊಸದಾಗಿ ಪರವಾನಗಿ ನೀಡಲಾಗಿದೆ (ತಾಲ್ಲೂಕುವಾರು ಸಂಪೂರ್ಣ ಮಾಹಿತಿ ನೀಡುವುದು)

ಇ) ಸರ್ಕಾರದ ಜಮೀನುಗಳಲ್ಲಿ ಹೊಸದಾಗಿ ಜಲ್ಲಿಕ್ರಷರ್‌ಗಳಿಗೆ ಅರ್ಜಿ ಸಲ್ಲಿಸಿದವರ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)